ದೇವರ ನಾಮದಲ್ಲಿ ಇಷ್ಟು ನಂಬಿಕೆಯನ್ನಿಟ್ಟುಕೊಂಡ ನಾಮಜಪದ ಇವರ ಈ ಪರಂಪರೆಯಲ್ಲಿ ಸಾಧಕರಿಗೆ ಅಥವಾ ಸಿದ್ಧರಿಗೆ ಹೆಸರುಗಳೇ ಯಾಕಿರುವುದಿಲ್ಲ ಎಂದು ಥಟ್ಟನೆ ಹೊಳೆದುಬಿಟ್ಟಿತು. ಈ ದೇಹಕ್ಕೊಂದು ಹೆಸರಿಟ್ಟುಕೊಂಡು ಸಂಬಂಧ ಕಲ್ಪಿಸಿಕೊಳ್ಳುವುದೂ ಇವರ ದೃಷ್ಟಿಯಲ್ಲಿ ಪಾಪವೋ ಏನೋ! ಮನುಷ್ಯನಾಗಿ ಹುಟ್ಟಿದ್ದೇನೆ, ಏನೇನೋ ಪಾಪಗಳನ್ನು ಮಾಡಿಬಿಟ್ಟಿದ್ದೇನೆ, ನನಗಿರುವ ಹಾದಿ – ದೇವರ ಹೆಸರು ಹೇಳುವುದು, ಜಪ ಮಾಡುವುದು. ಹಾಗೆ ಮಾಡುತ್ತಾ ಮಾಡುತ್ತಾ ನನ್ನೆಲ್ಲ ಪಾಪಗಳೂ ಇಲ್ಲವಾಗಬೇಕು – ಬೆಂಕಿಯಲ್ಲಿ ಒಣಹುಲ್ಲೋ, ಸೌದೆಯೋ ಸುಟ್ಟುಹೋದಂತೆ. ಸತ್ತ ನಂತರದ ದಹನಕ್ರಿಯೆಯ ಸ್ವರೂಪಾರ್ಥವೂ ರೂಪಕಾರ್ಥವೂ ಸ್ಮಶಾನದ ಬೆಂಕಿಯಂತೆ ಹಠಾತ್ತನೆ ಕಣ್ಣೆದುರು ಕಂಡು ಅದೃಶ್ಯವಾಯಿತು.

ಎಷ್ಟೋ ಹೊತ್ತು ಹಾಗೇ ಕುಳಿತಿದ್ದಿರಬೇಕು. ಸ್ವಾಮಿಗಳು ನನ್ನ ಪಕ್ಕಕ್ಕೆ ಬಂದು ಕುಳಿತುದನ್ನು ಗಮನಿಸಿರಲಿಲ್ಲ. ‘ನೀವು ಬಂದುದು ನೋಡಲಿಲ್ಲ’ ಎನ್ನುತ್ತ ಅವರ ಕಾಗದ ವಾಪಸು ಕೊಟ್ಟೆ. ‘ಏನಾದರೂ ಅನುಭವ ಆಯಿತೇನು?’ ಎಂದರು. ಅವರ ಪ್ರಶ್ನೆ ಅಂತರಂಗ ಭೇದಿಸಿದಂತಿತ್ತು. ‘ನನಗೆ ಸಂಸ್ಕೃತ ಬಾರದು. ಮೊಬೈಲ್ ಮೂಲಕ ಈ ಶ್ಲೋಕದ ಅರ್ಥ ತಿಳಿದುಕೊಂಡೆ’ ಎಂದು ಹೇಳಿ ನನಗೆ ಹೊಳೆದುದನ್ನು ವಿವರಿಸಿದೆ. ‘ಈ ದೃಷ್ಟಿ ಸರಿಯಾಗಿದೆಯೇ?’ ಎಂದೆ. ‘ಸರಿಯಾಗೇ ಇದೆ’, ‘ಆಗಬಹುದು’ ಎಂದೆಲ್ಲಾ ಹೇಳುತ್ತಾ ಅತ್ತಿಂದಿತ್ತ ವಾಲುತ್ತಾ ಕೂತವರು, ‘ನಾನು ತಿಳಿಯದೇ ಭಗವಂತನ ನಾಮ ಉಚ್ಚರಿಸಿದವನು’ ಎಂದರು.

‘ಬಂದಾಗಲೇ ಹೇಳಿದೆ, ನನ್ನ ಜೀವನದಲ್ಲಿ ವಿಶೇಷ, ಪ್ರತ್ಯೇಕ ಎನ್ನುವಂಥಾದ್ದು ಏನು ಇಲ್ಲ. ರಸ್ತೆ ಕೆಲಸ, ಒಳಚರಂಡಿ ಕೆಲಸ ಎಲ್ಲಾ ಮಾಡಿದ್ದೇನೆ. ಮಾಡಬಾರದ್ದೂ ಮಾಡಿಬಿಟ್ಟಿದ್ದೇನೆ – ಮಾಡುವಾಗ ಗೊತ್ತಾಗಿರಲಿಲ್ಲ. ಅಥವಾ ಹಾಗೂ ಅಲ್ಲ. ಆಸೆಗಳ ಸೆಳೆತ ದೊಡ್ಡದು ಕಣಪ್ಪ. ಎಂತೆಂಥ ಪಾಪಗಳನ್ನೂ ಮಾಡಿಸಿಬಿಡುತ್ತದೆ. ನನಗ್ಯಾರೂ ಇಲ್ಲ, ಇಲ್ಲವಲ್ಲ ಅನ್ನಿಸಿದಾಗ ದೇವರೊಬ್ಬ ಇದ್ದಾನೆ ಅನ್ನಿಸಿಬಿಡುತ್ತಿತ್ತು. ಊರಲ್ಲಿ ನಾನು ಹುಟ್ಟಿದ ಜಾಗ – ಅದು ನನ್ನದು ಅನ್ನಿಸುತ್ತಿತ್ತು. ಹೀಗೆ ಎರಡು ಬಂಧಗಳಿದ್ದವು ಈ ಜೀವಕ್ಕೆ.’

ಅಷ್ಟು ಹೊತ್ತು ಸುಮ್ಮನಾದರು. ಸೈಕಲ್‌ನಲ್ಲಿ ಎಳನೀರು ತುಂಬಿಕೊಂಡು ಹೋಗುತ್ತಿದ್ದ ಹಳ್ಳಿಯವನೊಬ್ಬನನ್ನು ನಿಲ್ಲಿಸಿ ಒತ್ತಾಯ ಮಾಡಿ ಎರಡು ಎಳನೀರು ಪಡೆದುಕೊಂಡೆ. ಅವನು ಮಾರಾಟಕ್ಕೆ ಅಂತ ಹೊರಟವನಲ್ಲವಂತೆ. ‘ನಿಮ್ಮ ಮನೆಗೆ ಬಂದರೆ ಎಳನೀರು ಕೇಳಿದರೆ ಕೊಡುತ್ತಿರಲಿಲ್ಲವೇನಪ್ಪ?’ ಎಂದರು ಸ್ವಾಮಿಗಳು. ಹಳ್ಳಿಗ ಬೇಗ ಮೆದುವಾದ. ‘ಹೌದು ಬುದ್ಧಿ’ ಎನ್ನುತ್ತಾ ಎರಡು ಎಳನೀರು ಕೊಟ್ಟ. ಬೇಡ ಎಂದರೂ ಅವನಿಗೆ ಎರಡು ನೋಟು ಕಿಸೆಯಲ್ಲಿಟ್ಟು ಬೆನ್ನು ತಟ್ಟಿ ಕಳಿಸಿದೆ. ಎಳನೀರು ಕುಡಿದ ಸ್ವಾಮಿಗಳು



ಉಲ್ಲಸಿತರಾದರು. ‘ಶಂಭೋ’ ಎಂದು ಆಕಾಶಕ್ಕೆ ಕೈಮುಗಿದರು.

‘ನನಗಾಗ ಐವತ್ತು ವರ್ಷವಾಗಿರಬೇಕು. ಎಲ್ಲೆಲ್ಲೋ ದುಡಿದು ಹಣ್ಣಾಗಿದ್ದೆ. ನನ್ನ ಊರಿಗೇ ಹೋಗಿ ಯಾಕಿರಬಾರದು ಅನ್ನಿಸಿತು. ಉಳಿಸಿದ್ದ ಚೂರುಪಾರು ಹಣ, ಪಾತ್ರೆ, ಪಗಡೆ ತೆಗೆದುಕೊಂಡು ಊರಿಗೆ ಬಂದೆ. ನನ್ನದೆನ್ನುವ ಮನೆ ಇತ್ತು, ಆದರೆ ನಮ್ಮ ಸಂಬಂಧಿಗಳಾರದೋ ಪಾಲಾಗಿತ್ತು. ಅವರ್ಯಾರೂ ನನ್ನನ್ನು ಗುರುತಿಸಲಿಲ್ಲ. ನನ್ನ ಹೆಸರು, ಅಪ್ಪ ಅಮ್ಮನ ಹೆಸರು ಏನು ಹೇಳಿದರೂ ಒಪ್ಪಲಿಲ್ಲ, ಸ್ವಾಮಿ. ಪಂಚಾಯ್ತಿ ಸೇರಿಸಿದೆ. ಯಾರೂ ನನ್ನನ್ನು ಒಪ್ಪಿಕೊಳ್ಳಲಿಲ್ಲ. ‘ನೀನೇ’ ಅನ್ನೋದಕ್ಕೆ ಏನಾದರೂ ಸಾಕ್ಷಿ ಇದೆಯಾ? ಎಂದು ಕೇಳಿದರು. ‘ನನ್ನ ಮಾತೇ ಸಾಕ್ಷಿ ಸ್ವಾಮಿ’ ಎಂದು ಕೈ ಮುಗಿದೆ. ಎಲ್ಲರೂ ಹೋ ಅಂತ ನಕ್ಕುಬಿಟ್ಟರು. ಹೋಗು, ಹೋಗು ಅಂದರು. ಅದೊಂದೇ ಒಂದು ರಾತ್ರಿ ನಾನು ಹುಟ್ಟಿದ ಮನೇಲಿ ಮಲಗಿಹೋಗ್ತೇನೆ ಎಂದು ಕೈ ಮುಗಿದು ಕೇಳಿಕೊಂಡೆ. ಅದಕ್ಕೂ ಒಪ್ಪಲಿಲ್ಲ, ‘ಹೀಗೇ ನಡೀತಾ ಮುಂದೆ ಹೋಗು, ಮುಂದಿನ ಹಳ್ಳಿಯಲ್ಲಿ ಛತ್ರ ಇದೆ’ ಎಂದರು.

ಈ ಮಾತುಗಳನ್ನು ಹೇಳುವಾಗ ಸ್ವಾಮಿಗಳು ಈಗಲೂ ಗದ್ಗದಗೊಳ್ಳುತ್ತಿದ್ದರು. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಮಾತು ಮುಂದುವರಿಸಿದರು:

‘ಆದರೆ ಆದುದೆಲ್ಲಾ ಒಳ್ಳೆಯದಕ್ಕೇ. ಭೂಮಿಯ ಮೇಲೆ ಒಂದು ತುಂಡು ನೆಲಕ್ಕೆ ನನಗೆ ಅಧಿಕಾರ ಇದೆ ಅಂತ ಭಾವಿಸಿದ್ದೆ. ಅದು ಭ್ರಮೆ ಅಂತ ತಿಳಿಯಿತು. ಏನಾಯಿತು? ಏನೂ ಆಗಲಿಲ್ಲ, ಎಲ್ಲವೂ ಚೆನ್ನಾಗೇ ನಡೀತಿದೆ ಪ್ರಪಂಚದಲ್ಲಿ. ಮುಂದಿನ ಪ್ರಯಾಣದಲ್ಲಿ ನನ್ನ ಗುರು ಸಿಕ್ಕರು. ಅದೆಲ್ಲಾ ಆಗಲೇ ಹೇಳಿದ್ದೇನೆ, ಸಾಕು ಬಿಡಿ, ಈಗ ಸಂಬಂಧ ಉಳಿಸಿಕೊಂಡಿರೋದು ದೇವರದು ಮಾತ್ರ.’

‘ಮತ್ತೆ , ಆಗ ನೋಡಿದರೆ ದೀರ್ಘಾಯುಷ್ಯ ಶಾಪ ಎಂದಿರಿ.’

‘ಶಾಪವೇ ಮತ್ತೆ, ನಂಬಿದ ದೇವರು ಕೈಗೆ ಸಿಗದೆ ಆಟವಾಡಿಸುತ್ತಲೇ ಇದ್ದರೆ.’

ಇಷ್ಟು ಹೊತ್ತಿಗೆ ಆಟೋ ಭದ್ರಯ್ಯ ನಮ್ಮನ್ನು ವಾಪಸು ಕರೆದುಕೊಂಡು ಹೋಗಲು ಬಂದಿದ್ದ. ನಾವು ಮರದಡಿಗೆ ಕೂತಿದ್ದಲ್ಲೇ ಬಂದು ಸ್ವಾಮಿಗಳ ಪಾದಕ್ಕೆ ಬಿದ್ದು ಗಳಗಳ ಅಳತೊಡಗಿದ.

‘ಏನಾಯಿತಪ್ಪ?’ ಎಂದೆವು.

‘ಅಯ್ಯೋ, ಏನೂ ಆಗಿಲ್ಲ ಬಿಡಿ. ಬೆಳಿಗ್ಗೆ ಅಯ್ಯನವರನ್ನು ನೋಡಿದಾಗಿನಿಂದ ಮನಸಿನಲ್ಲಿ ನಮ್ಮ ತಂದೆಯವರೇ ನೆನಪಿಗೆ ಬರ್ತಿದ್ದಾರೆ. ಆ ಅಪ್ಪನಿಗೆ ತಕ್ಕ ಮಗನಲ್ಲ ಸ್ವಾಮಿ, ನಾನು. ಅವರ ವಿಷಯದಲ್ಲಿ ತುಂಬ ಕೆಟ್ಟದಾಗಿ ನಡೆದುಕೊಂಡಿದ್ದೇನೆ. ಸ್ವಾಮಿಗಳ ಕಾಲಿಗೆ ಬಿದ್ದು ಕೇಳ್ತಾ ಇದೀನಿ. ನನಗೇನು ಪ್ರಾಯಶ್ಚಿತ್ತ ಅಂತ ಹೇಳಬೇಕು’ ಎಂದ.

‘ಹೇಳ್ತೇನಪ್ಪ, ನಮ್ಮ ಜೋಪಡಿಗೆ ಆಗ ಈಗ ಬರ್ತಾ ಇರು. ನನಗೆ ತಿಳಿದಿದ್ದು ಹೇಳ್ತೇನೆ. ತಪ್ಪು ಮಾಡದವರು ಯಾರಿದ್ದಾರಪ್ಪ?’ ಎಂದು ಸಮಾಧಾನ ಹೇಳಿದರು.

ವಾಪಸು ಪ್ರಯಾಣದಲ್ಲಿ ನನಗೆ ಮಾತಿಗೆ ಅವಕಾಶವೇ ಇಲ್ಲ. ಭದ್ರಯ್ಯ ಏನೇನೋ ಹೇಳುತ್ತಲೇ ಇದ್ದ. ಈ ಸ್ವಾಮಿಗಳೂ ‘ಇರಲಿಬಿಡು’, ‘ಆಗಲಿಬಿಡು’ ಅನ್ನುತ್ತಲೇ ಇದ್ದರು. ಒಂದೈದು ನಿಮಿಷ ಅವರಿಗೆ ನಿದ್ರೆಯೂ ಬಂತೆಂದು ಕಾಣುತ್ತದೆ. ಮಾಗಡಿ ಬಂತು. ‘ಸ್ವಾಮಿಗಳನ್ನು ಅವರ ಗುಡಿಸಿಲ ಬಳಿ ಬಿಡೋಣ’ ಎಂದೆ. ಭದ್ರಯ್ಯ ಅದಕ್ಕೆ ತಯಾರಾಗಿಯೇ ಇದ್ದ. ಅವರ ಗುಡಿಸಿಲ ಬಳಿ ನಾನೂ ಇಳಿದೆ. ಅವರು ಇಳಿಯಲು ಸಹಾಯಮಾಡಿದೆ.

‘ಒಂದು ವಿಷಯ’ ಅಂದರು.

‘ಹೇಳಿ ಸ್ವಾಮಿ’ ಅಂದೆ.

‘ಭದ್ರಯ್ಯ, ಒಂದು ನಿಮಿಷ ಆಚೆ ಇರ್ತೀಯ? ಇವರ ಬಳಿ ಒಂದು ವಿಷಯ ಹೇಳಬೇಕು’ ಅಂದರು.

ಭದ್ರಯ್ಯ ಗೂಡಂಗಡಿ ಕಡೆ ಹೋದ.

ಸ್ವಾಮಿಗಳು ನನ್ನ ಕೈ ಹಿಡಿದುಕೊಂಡರು. ‘ಒಂದು ಉಪಕಾರ ಮಾಡಬೇಕು. ಇಲ್ಲ ಅನ್ನಬಾರದು. ಈ ದೇಹ ಹೋದದ್ದನ್ನ ಭದ್ರಯ್ಯ ನಿಮಗೆ ತಿಳಿಸೋ ಹಾಗೆ ಏರ್ಪಾಡು ಮಾಡ್ತೇನೆ. ಇದನ್ನೊಂದು ಬೂದಿ ಮಾಡಿಸಲು ವ್ಯವಸ್ಥೆ ಮಾಡಿಕೊಡಬೇಕು, ಆದೀತೆ?’ ಎಂದರು.

ಗಂಟಲು ಕಟ್ಟಿತು. ಇದೆಂಥ ಮಾತು! ಇದೇನು ಮಾನವನ ಪಾಡು!

‘ಭದ್ರಯ್ಯ ವಿಷಯ ತಿಳಿಸಿದಾಗ ಮುಂದಿನ ಏರ್ಪಾಡು ನನ್ನದು. ಆದರೆ ನೀವು ಇನ್ನೂ ಒಂದಷ್ಟು ಕಾಲ ಇರಬೇಕು.’

ಸ್ವಾಮಿಗಳು ನಕ್ಕರು. ಇನ್ನಷ್ಟು ಕಾಲ ಇರಬೇಕೆಂಬ ಲೋಕಾರೂಢಿಯ ಮಾತುಗಳಲ್ಲಿ ಅವರಿಗೆ ವಿಶ್ವಾಸ ಕಾಣಲಿಲ್ಲ. ಆದರೆ ಅವರ ಅಂತ್ಯಕ್ರಿಯೆಯ ಏರ್ಪಾಡು ನಡೆದುದರಿಂದ ಅವರು ಸಂತುಷ್ಟರಾಗಿದ್ದರು. ಇದಾವುದನ್ನೂ ಕೇಳಿಸಿಕೊಂಡಿರದ ಭದ್ರಯ್ಯ ಹತ್ತು ನಿಮಿಷ ಬಿಟ್ಟು ಬಂದು ನನ್ನನ್ನು ಬೆಂಗಳೂರು ಬಸ್ಸಿಗೆ ಹತ್ತಿಸಿದ.

ಆಗ ಈಗ ಮಾತಾಡುತ್ತಲಿರುತ್ತಾನೆ ಭದ್ರಯ್ಯ. ನಾನೇನೂ ಸ್ವಾಮಿಗಳ ಕುರಿತಾಗಿ ಕೇಳಲು ಹೋಗಲಿಲ್ಲ. ಅವರಲ್ಲಿ ಹೋಗಿ ಬರ್ತಾ ಇದ್ದೇನೆ, ಚೆನ್ನಾಗಿದ್ದಾರೆ ಅಂತ ಮಾತ್ರ ಒಂದು ಸಲ ಹೇಳಿದ.

...ಕಾಯ್ತಾ ಇದ್ದೇನೆ.

ಪ್ರತಿಕ್ರಿಯಿಸಿ: feedback@sudha.co.in